**<u>ದಿಃ 05-01-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಕೆ.ಸಿ.ಪಿ. ವಕೀಲರಿಂದಃ</u>**

ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

ನನಗೆ ಈಗ ತೋರಿಸುತ್ತಿರು ಮೃತ್ಯು ಪತ್ರವನ್ನು ಬಸಮ್ಮ ಇವರು ಶಾಂತಪ್ಪ ನಾಗಪ್ಪ ಆದಿಮನಿ ಇವರಿಗೆ ದಿಃ 20-12-2010 ರಂದು ಬರೆದುಕೊಟ್ಟಿರುತ್ತಾರೆ. ಸಾಕ್ಷಿ ಸದರಿ ದಾಖಲೆಯನ್ನು ಗುರುತಿಸಿದ್ದರಿಂದ ಮೃತ್ಯುಪತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರ ಎಲ್ಲ ಪುಟಗಳ ಮೇಲೆ ಅಂದರೆ 8 ಕಡೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು ಸಾಕ್ಷಿ ಅವುಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-2(ಎ), ನಿಪಿ-2(ಬಿ), ನಿಪಿ-2(ಸಿ), ನಿಪಿ-2(ಡಿ), ನಿಪಿ-2(ಇ), ನಿಪಿ-2(ಎಫ್), ನಿಪಿ-2(ಜಿ) ಹಾಗೂ ನಿಪಿ-2(ಎಚ್) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ನಾನು ಹಾಗೂ ಜಯಶಂಕರ್ ಲಾಲ್ ನಾರಾಯಣ್ ಬಾಯ್ ಪಟೇಲ ಮತ್ತು ಪಿ.ಎಂ.ಬೆನ್ನೂರು ವಕೀಲರು ಬರಹಗಾರರು ಎಂದು ಸಹಿ ಮಾಡಿದ್ದಾರೆ. ಸಾಕ್ಷಿ ತಮ್ಮ ಸಹಿ, ಇನ್ನೊಬ್ಬ ಸಾಕ್ಷಿದಾರರ ಸಹಿ ಹಾಗೂ ಶ್ರೀ ಪಿ.ಎಂ.ಬೆನ್ನೂರು ವಕೀಲರ ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-2(ಐ), ನಿಪಿ-2(ಜೆ) ಹಾಗೂ ನಿಪಿ-2(ಕೆ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲಿಗೆ ಎದುರುಗಾರರ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಪ್ರಕರಣವನ್ನು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.